**KANNADA PRABHA**

Date: Tuesday, March 4, 2014 Page: 2

Edition: Mysore Language: Kannada

# ನ್ಯಾನ್ಸಿ ಶರ್ಮಾಗೆ ಉತ್ತಮ ಲೇಖನ ಪ್ರಶಸ್ತಿ

ಮೈಸೂರು: ಕೊಚ್ಚಿಯ ಶ್ರೀ ಅಮೃತ ವ್ಯವಹಾರ ನಿರ್ವಹಣ ಶಾಲೆಯಲ್ಲಿ ನಡೆದ ರಾಷ್ಟ್ರೀಯ ಮಟ್ಟದ ವ್ಯವಹಾರ ವಿಷಯಕ್ಕೆ ಸಂಬಂಧಿಸಿದ ಲೇಖನ ಸ್ಪರ್ಧೆಯಲ್ಲಿ ಮೈಸೂರಿನ ಎಸ್‌ಡಿಎಂ ಐಎಂಡಿ ವಿದ್ಯಾರ್ಥಿನಿ ನ್ಯಾನ್ಸಿ ಶರ್ಮಾ ಅವರ ಉದ್ಯಮಶೀಲತೆಯ ಸ್ಫೂರ್ತಿ ಮತ್ತು ಸಾಮಾಜಿಕ- ಆರ್ಥಿಕ ಬೆಳವಣಿಗೆ ಎಂಬ ಲೇಖನಕ್ಕೆ ಉತ್ತಮ ಲೇಖನ ಪ್ರಶಸ್ತಿ ಸಂದಿದೆ.

ಶರ್ಮಾ ಅವರು ತಮ್ಮ ಲೇಖನದಲ್ಲಿ ಉದ್ಯಮಶೀಲತೆ ಮತ್ತು ಸಾಮಾಜಿಕ-ಆರ್ಥಿಕ ಬೆಳವಣಿಗೆ ಹೆಚ್ಚು ಸಾಂಗತ್ಯ ಹೊಂದಿರುವ ವಿಷಯಗಳಾಗಿದ್ದು, ಸಾಮಾಜಿಕ ಯೋಗಕ್ಷೇಮಕ್ಕೆ ಕಾರಣವಾಗುತ್ತದೆ. ಅಭಿವೃದ್ಧಿಶೀಲ ದೇಶವಾಗಿರುವ ಭಾರತದಲ್ಲಿ ಈ ಸ್ಫೂರ್ತಿ ತುಂಬಾ ಅವಶ್ಯಕ. ನಮ್ಮ ಗ್ರಾಮೀಣ ಪ್ರದೇಶದಲ್ಲಿ ಕೂಡ ಹೇರಳವಾಗಿ ಈ ಭಾವನೆ ಇದ್ದರೂ ಇದಕ್ಕೆ ಸೂಕ್ತ ಪೋಷಣೆ ದೊರಕುತ್ತಿಲ್ಲ ಎಂದು ವಿವರಿಸಿದ್ದರು.

